# ನವಿಲುಗನ್ನಡಿ

- ಏಪ್ರಿಲ್ ಸಂಚಿಕೆಯಲ್ಲಿ ಕೆ.ವಿ. ತಿರುಮಲೇಶ್ ಅವರ ಬಗೆಗೆ ಅಗ್ರಹಾರ ಕೃಷ್ಣಮೂರ್ತಿ ಬರೆದ ಲೇಖನ ಅವರ ನಡುವಿನ ಆಪ್ತ ಒಡನಾಟವನ್ನು ಪರಿಚಯಿಸುವಂತಿದೆ. ವ್ಯಕ್ತಿ ತಾನು ಬೆಳೆದಂತೆ ಆತನ ಗ್ರಹಿಕೆ ಹಾಗೂ ಸ್ಪಂದನೆ ವಿಸ್ತಾರಗೊಳ್ಳಬೇಕೆಂಬುದನ್ನು ಲೇಖನ ಮನನ ಮಾಡುವಂತಿದೆ.

**ಎಂ.ಜಿ. ರಂಗಸ್ವಾಮಿ, ಹಿರಿಯೂರು**

- ಯೋಗೀಂದ್ರ ಮರವಂತೆ ಅವರ 'ಶ್ಯಾವಿಗೆ ಹಬ್ಬ' ಪ್ರಬಂಧ ಈ ಬೇಸಿಗೆಯಲ್ಲಿ ತಂಪಿನ ರಾಸಾದೌತಣ ನೀಡಿತು. ಸುಧಾ ಆಡುಕಳ ಅವರ 'ಹೊಳೆಯೆಂಬ ಸಂಗಾತಿ' ಉತ್ತಮ ಬರಹ. ಊರ ಹೊಳೆಯನ್ನೇ ಒಂದು ರೂಪಕವಾಗಿಸಿ, ಇಂದಿನ ಧಾವಂತದಲ್ಲಿ ನಾವೇ ತೋಡಿಕೊಳ್ಳುತ್ತಿರುವ ಅಪಾಯಗಳನ್ನು ಮನಮುಟ್ಟುವಂತೆ ಚಿತ್ರಿಸಿದ್ದಾರೆ.

**ನಾಗರಾಜ್ ಬಿ.ಎಸ್. ಶಿವಮೊಗ್ಗ**


- ಸಂಪತ್ ಸಿರಿಮನೆ ಅವರ 'ರಿಪೇರಿ' ಪ್ರಬಂಧ ಅದೆಷ್ಟು ಮಾರ್ಮಿಕವಾಗಿದೆ! ಹಳೇ ವಸ್ತುಗಳ ರಿಪೇರಿಯಂತಹ ಸಾಮಾನ್ಯ ವಿಷಯವನ್ನು ಎಷ್ಟೊಂದು ಸ್ವಾರಸ್ಯಕರವಾಗಿ ನಿರೂಪಿಸಬಹುದು ಎಂಬುದಕ್ಕೆ ಈ ಲೇಖನ ಸಾಕ್ಷಿ!

**ಶಂಕರನಾರಾಯಣ ಭಟ್, ಮಾಡಗೇರಿ**

- ಡಾ.ನಾ.ಮೊಗಸಾಲೆ ಅವರ 'ಆಗು ನೀ ಅನಿಕೇತನ' ಕಥೆಯು ಮನುಷ್ಯ ಜೀವನದಲ್ಲಿ ಜಾತಿ, ಮತ, ಧರ್ಮ, ಪಂಥಗಳಿಗಿಂತ ಮಾನವೀಯತೆಯೆ ಮುಖ್ಯ ಎನ್ನುವುದನ್ನು ಸಾರುತ್ತದೆ. ಸದಾಶಿವ್ ಸೊರಟೂರು ಅವರ 'ಹಲಗೆಯ ಸದ್ದು' ಕಥೆ ಚೆನ್ನಾಗಿ ಮೂಡಿಬಂದಿದೆ.

**ಪ್ರಮೋದ್ ಕುಲಕರ್ಣಿ, ಬೆಂಗಳೂರು,**
**ಶಾಂತ ಕುಮಾರ್, ಸರ್ಜಾಪುರ**

- ಭುವನೇಶ್ವರಿ ಹೆಗಡೆ ಬರೆದ 'ಹಾಸ್ಯವೆನಲು ಹಗುರವೇ...' ಹಾಸ್ಯದ ಹೆಸರಿನಲ್ಲಿ ನಡೆಯುವ




ಅಪಹಾಸ್ಯ, ಅಶ್ಲೀಲ, ದ್ವಂದಾರ್ಥಗಳ ಬಗ್ಗೆ ಚರ್ಚಿಸಿರುವುದು ಸಮಂಜಸವಾಗಿದೆ.

**ಕಾವ್ಯಾ ಎಚ್.ಎಸ್. ಧಾರವಾಡ**

- ಸದಾಶಿವ್ ಸೊರಟೂರು ಅವರ 'ಹಲಗೆಯ ಸದ್ದು' ಕಥೆ ಬಹಳ ಇಷ್ಟವಾಯಿತು. ಕಥೆಯ ಕೊನೆ ತುಂಬಾ ಕುತೂಹಲಕಾರಿಯಾಗಿತ್ತು.

**ಗಿರೀಶ ಸೊಲ್ಲಾಪುರ, ಬೀಳಗಿ**

- ಸಂಚಿಕೆಯ ಎಲ್ಲಾ ಪ್ರಬಂಧಗಳು ಗಮನ ಸೆಳೆದವು. ಸ್ಮಿತಾ ಅಮೃತರಾಜ್ ಅವರ 'ಎನ್ನ ಮೂಗನ ಮಾಡಯ್ಯ ತಂದೆ' ಪ್ರಬಂಧ ಮನಸ್ಸಿಗೆ ಮುದ ನೀಡಿತು.

**ಸುನಿತಾ ಪಾಟೀಲ, ಗಂಗಾವತಿ**

- ಮಲ್ಲಿಕಾರ್ಜುನ ಹುಲಗಬಾಳಿ ಅವರ 'ಸಂಕರ' ಕಥೆ ವಿಚಾರಪೂರ್ಣವಾಗಿದೆ. ಸಂಬಂಧಗಳನ್ನು ಎಂದೂ ಸಹಜವಾಗಿ ಒಪ್ಪದ ಸಂಕೀರ್ಣವಾದ ಸಮಾಜವನ್ನು ಇದರಲ್ಲಿ ಕಾಣಬಹುದು.

**ಬಸವರಾಜ ಕುಂಬಾರ, ಬಾಗಲಕೋಟೆ**